**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**ಸಿ.ಸಿ. ನಂ. 529/2025** **ಫ್ರಾ.ಸಾ – 4**

**ಚಾ.ಸಾ – 5**

**ದಿನಾಂಕಃ 25.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ದೇವಯ್ಯ |
| ತಂದೆಯ ಹೆಸರು | : | ಸಿ ಪಿ ಸುಬ್ಬಯ್ಯ |
| ವಯಸ್ಸು | : | 77 ವರ್ಷ |
| ಉದ್ಯೋಗ | : | ನಿವೃತ್ತ ನೌಕರರು |
| ವಾಸ ಸ್ಥಳ | : | ನೆಮ್ಮಲೆ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ದಿ. 22.01.2025 ರಂದು ನಾನು ಮತ್ತು ಚಾಸಾ 4 ರವರು ಶ್ರೀಮಂಗಲದ ಶೆಟ್ಟಿಗೇರಿ ಟೌನ್ ನಲ್ಲಿದ್ದೆವು. ಶ್ರೀಮಂಗಲ ಪೊಲೀಸರು ಸಹಿ ಮಾಡಬೇಕೆಂದು ನೆಮ್ಮಲೆ ಗ್ರಾಮಕ್ಕೆ ನಮ್ಮನ್ನು ಕರೆದುಕೊಂಡು ಹೋದರು, ರಸ್ತೆಯ ಗಲಾಟೆ ವಿಚಾರಕ್ಕೆ ಮಹಜರ್ ಮಾಡಿದರು. ಪೊಲೀಸರು ಗಂಟು ಬಟ್ಟೆ ತೆಗೆದುಕೊಂಡು ಬಂದು ನನ್ನ ಸಮಕ್ಷಮ ತೆರೆದು ತೋರಿಸಿದರು. ಅದು ಚಾಸಾ 1 ರವರ ಬಟ್ಟೆ ಎಂದು ಹೇಳಿದರು. ನನ್ನ ಸಮಕ್ಷಮ ಸ್ಥಳದಲ್ಲಿ ಫೋಟೋ ತೆಗೆದರು.

ಸಾಕ್ಷಿ ನಿ ಪಿ 2 ಮಹಜರ್‌ನಲ್ಲಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ಮತ್ತು 4 ಫೋಟೋವನ್ನು ಹಾಗೂ ಮು ಮಾ 1ಅನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**C.C. No. 529/2025** **PW – 4**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ–**

ಚಾಸಾ 1 ರವರು ತೋರಿಸಿಕೊಟ್ಟಂತೆ ಮಹಜರ್ ಅನ್ನು 11.50 ರಿಂದ 12.15 ತನಕ ಮಾಡಿದರು ಎಂದರೆ ಸರಿ. ಚಾಸಾ 1 ರವರೇ ಹರಿದ ಮು ಮಾ 1 ಅನ್ನು ಪೊಲೀಸರಿಗೆ ಕೊಟ್ಟರು ಎಂದರೆ ಸರಿ. ಮಹಜರ್ ವೇಳೆ ನನ್ನ ಸಮಕ್ಷಮ ಒಂದು ನಕ್ಷೆ ತಯಾರಿಸಿದರು ಎಂದರೆ ಸರಿ. ಈ ರಸ್ತೆಗೆ ಗದ್ದೆಗೆ ಹೋಗುವ ವ್ಯಾಜ್ಯದ ರಸ್ತೆ ಎಂದರೆ ಸರಿ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಸಿ. ಪಿ. ಪಿ. ವಕೀಲರಿಂದಃ**

ಚಾಸಾ 2 ರವರ ಚಿಕ್ಕಪ್ಪನವರಿಗೆ ಸೇರಿದ ರಸ್ತೆಯಾಗಿದೆ. ಈ ರಸ್ತೆ ಆರೋಪಿಗಳ ಕುಟುಂಬದವರಿಗೆ ಸೇರುತ್ತದೆ ಎಂದರೆ ಸರಿಯಲ್ಲ, ಅವರಿಗೆ ಬೇರೆ ರಸ್ತೆ ಇದೆ. ಈ ರಸ್ತೆ ಯಾರಿಗೆ ಸೇರುತ್ತದೆ ಎಂದು ಮಹಜರ್ ಮಾಡುವಾಗ ನಾನು ಕೇಳಿರುವುದಿಲ್ಲ. ನಾನು ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೋದಾಗ ಸ್ಥಳದಲ್ಲಿ ಜೆಸಿಬಿ ಇರಲಿಲ್ಲ. ಈ ರಸ್ತೆಯಲ್ಲಿ ವಾಹನಗಳು ಓಡಾಡುವುದಿಲ್ಲ. ಪೊಲೀಸರು ನನಗೆ ಹರಿದ ನೈಟಿಯನ್ನು ತೋರಿಸಿರುತ್ತಾರೆ. ಮು ಮಾ 1ನೈಟಿ ಅಲ್ಲ ಚೂಡಿದಾರ್ ಟಾಪ್ ಎಂದರೆ ಸರಿ. ಮು ಮಾ 1 ಚಾಸಾ 1 ರವರಿಗೆ ಸೇರಿದ್ದಲ್ಲ, ನನ್ನ ಸಮಕ್ಷಮ ಇದನ್ನು ಅಮಾನತುಪಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮು ಮಾ 1 ಅನ್ನು ವಶಪಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರು ಹಾಜರಿದ್ದರು. ರಸ್ತೆ ಎರಡು ಕಡೆ ಚಾಸಾ 2 ರವರ ಚಿಕ್ಕಪ್ಪ ಸತೀಶ್ ರವರ ಜಮೀನು ಇದೆ. ನನಗೆ ರಸ್ತೆಯ ಚೆಕ್ಕು ಬಂದಿ ಸರಿಯಾಗಿ ಹೇಳಲು ಬರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ, ಠಾಣೆಯಲ್ಲಿ ಸಹಿ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/–

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ